†ಶ್ರೀ ಆರ್. ಗುಂಡೂರಾವ್.—ಧಾರವಾಡದಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ ಎಂದು ಕಾರ್ಪೊರೇಷನ್ ಗಮನಕ್ಕೆ ಬಂದಿರುತ್ತದೆ. ಬಸ್‌ಗಳನ್ನು ಕೂಡ ಜಾಸ್ತಿ ಮಾಡಬೇಕೆಂದು ಕಾರ್ಪೊರೇಷನ್ ಯೋಜನೆ ಮಾಡಿದೆ. ಬಸ್‌ಗಳು ಹೆಚ್ಚಿಗೆ ಬಂದಾಗ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಭಾವೂರಾವ್ ದೇಶಪಾಂಡೆ.—ನಗರದಲ್ಲಿ ಕೇವಲ ೧೭ ಬಸ್‌ಗಳು ಮಾತ್ರ ಓಡಾಡುತ್ತಿರುತ್ತವೆ. ನಗರದ ವಿಸ್ತಾರ ಬಹಳ ಜಾಸ್ತಿ ಇರುತ್ತದೆ. ವಿಶ್ವವಿದ್ಯಾನಿಲಯ, ಅಗ್ರಿಕಲ್ಚರ್ ಕಾಲೇಜ್ ಇವೇ ಮುಂತಾದುವುಗಳನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಂಡು ಈಗಿರತಕ್ಕಂಥ ಬಸ್‌ಗಳ ಎರಡುಪಟ್ಟು ಸಂಖ್ಯೆಯನ್ನು ಜಾಸ್ತಿ ಮಾಡಿದರೆ ನಾಗರೀಕರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇದು ಧಾರವಾಡ ಒಂದೇ ಅಲ್ಲ. ಎಲ್ಲ ಊರುಗಳಲ್ಲಿಯೂ ಇದೇ ಸಮಸ್ಯೆ ಇರುತ್ತದೆ. ಬೆಂಗಳೂರು, ಮೈಸೂರಿನಲ್ಲಿಯೂ ಇದೇ ಸಮಸ್ಯೆ ಇರುತ್ತದೆ. ಬಸ್ಸುಗಳ ಕೊರತೆಯಿಂದ ಸಾಕಷ್ಟು ಬಸ್‌ಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ, ಬಸ್‌ಗಳು ಜಾಸ್ತಿ ಬಂದಂತೆಲ್ಲ ಧಾರವಾಡಕ್ಕೂ ಬಸ್‌ಗಳ ಸಂಖ್ಯೆಯನ್ನು ಜಾಸ್ತಿಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಬಾವೂರಾವ್ ದೇಶಪಾಂಡೆ.—ಧಾರವಾಡದಲ್ಲಿ ಡಿಪೋ ಕಟ್ಟುವುದಕ್ಕೆ ಹೊಸದಾಗಿ ಟೆಂಡರನ್ನು ಕರೆದಿದ್ದೇವೆ ಎಂದು ಹೇಳಿದ್ದೀರಿ. ಅಲ್ಲಿ ನಡೆಯುತ್ತಿದ್ದ ಕೆಲಸಗಳು ನಿಂತು ಕೆಲವು ವರ್ಷಗಳು ಕಳೆದಿವೆ. ಈವರೆಗೆ ಹೊಸದಾಗಿ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದ ಲಕ್ಷಣಗಳು ಕಾಣಲಿಲ್ಲ. ಆದ್ದರಿಂದ ನಿಜವಾಗಿ ಟೆಂಡರನ್ನು ಕರೆದು ಹಣ ಮಂಜೂರು ಮಾಡಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಆರ್. ಗುಂಡೂರಾವ್.—ಈಗಾಗಲೇ ಟೆಂಡರ್ ಕರೆದಾಗಿದೆ. ಆದಷ್ಟು ಜಾಗ್ರತೆ ಟೆಂಡರ್ ಬಗ್ಗೆ ತೀರ್ಮಾನ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಿಸುತ್ತೇವೆ.

Multistoreyed Building in Goa-Ves-Shahapur, Belgaum

391 SRI B.B. SAYANAK(Belgaum)–Will the Minister for Municipal Administration be pleased to state :

(a) whether it is a fact that the Belgaum Municipal Corporation is proposing to construct a multistoreyed building in Goa-ves Shahpur Belgaum ;

(b) what is the estimated cost of the building ;

(c) whether there is any need to construct the said building ;

(d) whether Government is aware that there is no school building for Konegalli Shahpur for Marathi Boys ;

(e) if so, the reasons why the corporation is not going to construct a school building for Marathi boys of Konegalli in Goa-Ves open site ?

SRI H. C. SRIKANTAIAH (Minister for Municipal, Administration)

(a) No resolution has been forwarded to the Government yet.

(b) Does not arise.

---

†Indicates that remarks or speeches have not been revised by the member concerned.

(c) Does not arise.

(d) Yes.

(e) This will be examined.

SRI B.B. SAYANAK—Has it come to the notice of the Government that a multistoreyed building in Goa-Ves-Shahapur, Belgaum being is construeted ?

† SRI H.C. SRIKANTAIAH—It has not come to the notice of the Government.

SRI B.B. SAYANAK—Has it come to the notice of the Government that the Belgaum City Corporation has given a name to one locality?

SRI H.C. SRIKANTAIAH—The hon. member brought it to my notice about 3-4 days back.

SRI B.B. SAYANAK—Is it not a fact that the Hon'ble Minister for Municipal Administration visited Belgaum and had a discussion with the Municipal Commissioner about the multistoreyed building in Goa-Ves-Shahapur, Belgaum?

SRI H.C. SRIKANTAIAH—Yes, Sir.

SRI B.B. SAYANAK—If so, why the Hon'ble Minister is giving an evasive answer with regard to the construction of this building ?

SRI H.C. SRIKANTAIAH—Sir. I said that the estimates have not yet been received by the Government. I inspected the spot along with the hon. member and they suggested for construction of a shoping complex, vegetable market, hospital, etc., because there is no shoping centre near Shahpur, Vadagaon, Madhavapura, Tilakwadi, Gadagwadi, areas. The residents of these areas are of the view that some marketing centre and shoping complex should be constructed by the Corporation.

SRI B.B. SAYANAK—Sir, it was stated that the estimate has not been received by the Government, and it was also stated that no resolution has been forwarded to the Government-may I know which is correct ?

SRI H.C. SRIKANTAIAH—Sir, neither the resolution nor the estimate have been received. I inspected the spot along with the hon. member, and the Corporation authorities told me that they are going to have a shoping complex in that area.

SRI B.B. SAYANAK—About the school building, can I have a categorical assurance from the hon'ble Minister that they are going to construct the school building ?

SRI H C. SRIKANTAIAH—During my last visit to Belgaum, we have taken a policy decision that any new school building will have a three language school, viz., Kannada, Urdu and Marati.

SRI B.B. SAYANAK—When the people of that area are requesting for a Marati school, why should the Government insist on three languages ?

SRI H. C. SRIKANTAIAH—Sir, the hon. member accepted on the spot to construct these three-language schools wherever the Corporation is going to construct the new schools.

Taken over PWD Roads in Krishnarajpet Taluk

461 SRI S. M. LINGAPPA (Krishnarajpet)—Will the Minister for Public Works be pleased to state :

(a) the number of roads taken over by the Public Works Department in Krishnarajpet taluk during the years 1975-76 and 1977-78 ;

(b) the names of these roads ;

(c) after taking over these roads, the amount spent on each of these roads for repairs ;

(d) after taking over these roads, to what extent each of these roads have been improved ?

SRI S. BANGARAPPA (Minister for Public Works)—

(a) The Public Works Department has taken over 11 Roads during 1975-76 and 9 roads in 1977-78.

(b) (c) and (d) The details are furnished in the list which is placed on the Table of the House.

ಶ್ರೀ ಎಸ್. ಎಂ. ಲಿಂಗಪ್ಪ—ಸ್ವಾಮಿ, ನನ್ನ ಪ್ರಶ್ನೆಗಳಿಗೆ ತಾವು ಉತ್ತರವನ್ನು ಒದಗಿಸಿದ್ದೀರಿ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ನಾನು ಕೇಳಿರುವ ೨೦ ರಸ್ತೆಗಳ ಪೈಕಿ ಅನೇಕ ರಸ್ತೆಗಳಿಗೆ ಜಿ-೬ ವರ್ಷದಿಂದ ಯಾವ ರಿಪೇರಿ ಕೆಲಸ ನಡೆದಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ಕಾರಣ ಏನು ಸ್ವಾಮಿ ?

† ಶ್ರೀ ಎಸ್. ಬಂಗಾರಪ್ಪ—ಸ್ವಾಮಿ, ನನ್ನ ಮುಂದೆ ಇರತಕ್ಕ ಪಟ್ಟಿ ಪ್ರಕಾರ ಸುಮಾರು ೬ ರಸ್ತೆಗಳಿಗೆ ಹಣವನ್ನೂ ಒದಗಿಸಿ ಕೆಲಸವನ್ನು ಪ್ರಾರಂಭ ಮಾಡಲಾಗಲಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಆದ್ಯತೆಯ ಮೇಲೆ ಯಾವುದು ಅವಶ್ಯಕತೆ ಇದೆ ಎಂಬುದನ್ನು ನೋಡಿಕೊಂಡು ಆದಕ್ಕನುಗುಣವಾಗಿ ಹಣವನ್ನು ಒದಗಿಸಿ ಕೆಲಸ ಮಾಡತಕ್ಕ ನೀತಿಗನುಗುಣವಾಗಿ ಕೆಲಸ ಮಾಡಲಾಗಿದೆ. ಉಳಿದ ರಸ್ತೆಗಳಿಗೆ ಹಣವನ್ನು ಒದಗಿಸಿ ಕೆಲಸ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ತಾವು ಪ್ರಸ್ತಾಪಿಸಿರುವ ರಸ್ತೆಗಳು ಪ್ರಾಮುಖ್ಯವಾದುದಾದರೆ ಹಣದ ಅನುಕೂಲತೆಯನ್ನು ನೋಡಿಕೊಂಡು ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ—ಈಗ ಕೆಲಸ ನಡೆಯುದೇ ಇರತಕ್ಕ ರಸ್ತೆಗಳ ಪೈಕಿ ಕೆಲವು ಪ್ರಾಮುಖ್ಯವಾದ ರಸ್ತೆಗಳೂ ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?